ದಿನಾಂಕಃ **25-07-2024** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣವಚನ ಬೋಧಿಸಲಾಯಿತು.

**<u>ಪಾಟೀ ಸವಾಲು ಃ ವಾದಿ ಪರ ವಕೀಲರಾದ ಶ್ರೀ ಎಸ್.ಎ.ಎನ್.ರವರಿಂದ ಃ</u>**

**1.** ಸರ್ವೇ ನಂಃ104/1 ರಲ್ಲಿ ಪಾಲುಪಟ್ಟಿಯಂತೆ ನಮ್ಮ ಕುಟುಂಬದಲ್ಲಿ ವಿಭಾಗ ಮಾಡಿಕೊಳ್ಳುವ ಮೊದಲು ಸರ್ವೇ ಇಲಾಖೆಯಿಂದ ಅಳತೆ ಮಾಡಿಸಿ ಹದ್ದು ಬಸ್ತು ಮಾಡಿಸಿಕೊಂಡಿಲ್ಲ ಎಂದರೆ ಸರಿ. ಅನುಭೋಗದ ಆದಾರದಲ್ಲಿ ಕಣ್ಣಳತೆಯಲ್ಲಿ ವಿಸ್ತೀರ್ಣವನ್ನು ನಮೂದಿಸಿಕೊಂಡು ಪಾಲುಪಟ್ಟಿ ಬರೆದುಕೊಂಡಿದ್ದೇವೆ ಎಂದರೆ ಸರಿ. ಸರ್ವೇ ನಂಃ104/1 ರಲ್ಲಿ 3 ಎಕರೆ 13 ಗುಂಟೆ ಒಟ್ಟು ವಿಸ್ತೀರ್ಣ ಇದೆ ಎಂದರೆ ಸರಿ. ವಾದಿ ಸಣ್ಣೇಗೌಡರಿಗೆ ಸರ್ವೇ ನಂಃ104/1 ರಲ್ಲಿ 1 ಎಕರೆ 15 ಗುಂಟೆ ಕೊಡಲಾಗಿದೆ ಎಂದರೆ ಸರಿಯಲ್ಲ. ದಿಃ18.05.1985 ರಂದು ನನ್ನ ಮತ್ತು ವಾದಿ ಸಣ್ಣೇಗೌಡ, ಗೋವಿಂದೇಗೌಡ, ಪಾಪೇಗೌಡ, ಪುಟ್ಟೇಗೌಡರ ನಡುವೆ ಪಾಲುಪಟ್ಟಿಯಾಗಿದೆ ಎಂದರೆ ಸರಿ. ಪಾಲುಪಟ್ಟಿಯಂತೆ ನನಗೆ 30 ಗುಂಟೆ ಬಂದಿದೆ ಎಂದರೆ ಸರಿ. ನಿಡಿ-1 ಪಾಲುಪಟ್ಟಿಯಂತೆ ಎಲ್ಲ ಹಿಸ್ಸೆದಾರರು ತಮ್ಮ ತಮ್ಮ ಹೆಸರಿಗೆ ಪಹಣಿ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ಸರ್ವೇ ನಂಃ104/1 ರಲ್ಲಿ ವಾದಿ ಸಣ್ಣೇಗೌಡನಿಗೆ ಪಾಲುಪಟ್ಟಿಯಂತೆ 1 ಎಕರೆ 15 ಗುಂಟೆ ಪಹಣಿಯಲ್ಲಿ ನಮೂದಾಗಿರುವ ಬಗ್ಗೆ ನಾನು ಯಾವ ನ್ಯಾಯಾಲಯದಲ್ಲು ಪ್ರಶ್ನಿಸಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದಿ ಸಣ್ಣೇಗೌಡನಿಗೆ ಸರ್ವೇ ನಂಃ104/1 ರಲ್ಲಿ ಪಾಲುಪಟ್ಟಿಯಲ್ಲಿ 1 ಎಕರೆ 15 ಗುಂಟೆ ಎಂದು ತಪ್ಪಾಗಿ ಬರೆದಿದ್ದು ಆತನಿಗೆ ಕೇವಲ 1 ಎಕರೆ 1 ಗುಂಟೆ ಮಾತ್ರ ಹಕ್ಕಿದೆ ಎಂದು ಇದೆ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿ. ವಾದಿ ಸಣ್ಣೇಗೌಡನಿಗೆ ಸರ್ವೇ ನಂಃ104/1 ರಲ್ಲಿ ಪಾಲುಪಟ್ಟಿಯಂತೆ 1 ಎಕರೆ 15 ಗುಂಟೆ ಅಳತೆ ಮಾಡಿಸಿ ಕೊಟ್ಟರೆ ನನ್ನದೇನು ತೊಂದರೆ ಇಲ್ಲ. ಸಾಕ್ಷಿಯು ನನಗೆ ಸೇರಿದ 30 ಗುಂಟೆ ಅಳತೆ ಮಾಡಿಸಿ ಕೊಟ್ಟರೆ ಸಾಕೆಂದು ನುಡಿಯುತ್ತಾರೆ. ಸರ್ವೇ ನಂಃ104/1 ರಲ್ಲಿ ಉತ್ತರ ದಿಕ್ಕಿನಿಂದ ಪ್ರಾರಂಬಿಸಿ 1 ಎಕರೆ 15 ಗುಂಟೆಯನ್ನು ಮೊದಲು ವಾದಿ ಸಣ್ಣೇಗೌಡನಿಗೆ ಹಂಚಿದರು ಎಂದರೆ ಸರಿ. ವಾದಿಯ ಸ್ವತ್ತಿನ ನಂತರ ಉತ್ತರ ದಿಕ್ಕಿಗೆ ನನಗೆ 15 ಗುಂಟೆಯನ್ನು ಕೊಟ್ಟರು, ನನ್ನ ಸ್ವತ್ತಿನ ನಂತರ ಗೋವಿಂದೇಗೌಡರಿಗೆ 24 ಗುಂಟೆ ಕೊಟ್ಟರು, ಅದಾದ ನಂತರ ಪುಟ್ಟೇಗೌಡನಿಗೆ 12 ಗುಂಟೆ

ಕೊಟ್ಟರು. ಸರ್ವೇ ನಂ:104/1 ರಲ್ಲಿ ಉತ್ತರ ದಿಕ್ಕಿನಿಂದ ಪ್ರಾರಂಬಿಸಿ ವಾದಿಗೆ ಸ್ವತ್ತನ್ನು ಕೊಟ್ಟ ನಂತರ ಉಳಿದ ಹಿಸ್ಸೆದಾರರಿಗೆ ಹಂಚಿದ್ದಾದರೆ ಎಂದರೆ ಸರಿ. ವಾದಿಯು ತನ್ನ ಜೀವಿತ ಕಾಲದಲ್ಲಿ ಸರ್ವೇ ನಂ:104/1 ರಲ್ಲಿ 1 ಎಕರೆ 1 ಗುಂಟೆಯನ್ನು ಪುಟ್ಟೇಗೌಡ ಬಿನ್ ಬೋರೇಗೌಡ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಿಪಿ-2 ರಂತೆ ವಾದಿ ಸಣ್ಣೇಗೌಡನ ಹೆಸರಿನಲ್ಲಿ ಇದ್ದ 1 ಎಕರೆ 15 ಗುಂಟೆ ಪೈಕಿ 1 ಎಕರೆ 1 ಗುಂಟೆಯನ್ನು ಪುಟ್ಟೇಗೌಡ ಬಿನ್ ಬೋರೇಗೌಡ ಎನ್ನುವವರಿಗೆ ಮಾರಾಟ ಮಾಡಿದ ನಂತರ ಉಳಿಕೆ 14 ಗುಂಟೆ ವಾದಿಯ ಹೆಸರಿನಲ್ಲೆ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ.

**2**. ನಿಡಿ-2 ರಂತೆ ನಾನು, ಚಿಕ್ಕತಾಯಮ್ಮ ಮತ್ತು ನಟರಾಜ್ ಎಂಬುವವರು ವಾದಿ ಸಣ್ಣೇಗೌಡ, ಪುಟ್ಟೇಗೌಡರವರ ವಿರುದ್ದ ಡಿ.ಡಿ.ಎಲ್.ಆರ್. ನ್ಯಾಯಾಲಯದಲ್ಲಿ ಸರ್ವೇ ನಂ:104/1 ರ ದುರಸ್ತಿಯನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿಸಿದ್ದೇವೆ ಎಂದರೆ ಸರಿ. ಸರ್ವೇ ನಂ:104/1 ರಲ್ಲಿ ದುರಸ್ತಿ ಪೋಡಿಯಾಗಿರುವ 4, 5, 6, 7 ನ್ನು ನ್ಯಾಯಾಲಯವು ರದ್ದುಪಡಿಸಿದೆ ಎಂದರೆ ಸರಿ. ವಾದಿ ಸಣ್ಣೇಗೌಡನಿಗೆ ಸರ್ವೇ ನಂ:104/1 ರಲ್ಲಿ ಹಿಸ್ಸೆ ಕೊಟ್ಟಿತ್ತು ಎಂದರೆ ಸರಿ. ರದ್ದಾದ ಪೋಡಿ ನಂ: 4, 5, 6, 7 ನ್ನು ಎಲ್ಲ ಇಡುವಳಿದಾರರಿಗೆ ನೋಟೀಸ್ ನೀಡಿ ಅವರ ಹಕ್ಕು, ಅನುಭವ, ಚಕ್ಕುಬಂದಿ ಅನುಸರಿಸಿ ಅಳತೆ ಮಾಡಿ ದುರಸ್ತಿ ಪಡಿಸಲು ತಹಶೀಲ್ದಾರ್ ರವರಗೆ ಆದೇಶವಾಗಿದೆ ಎಂದರೆ ಸರಿ. ನಿಡಿ-2 ರ ಆದೇಶದಂತೆ ತಹಶೀಲ್ದಾರ್ ರವರು ಇಲ್ಲಿಯವರೆಗೂ ಯಾವುದೇ ಸ್ಥಳ ಪರಿಶೀಲಿಸಿ ದುರಸ್ತಿ ಮಾಡಿಲ್ಲ. ಸದರಿ ಆದೇಶವಾದ ನಂತರ ನಾವು ಹಿಸ್ಸೆದಾರರು ನಮ್ಮ ವಕೀಲರ ಮೂಲಕ ತಹಶೀಲ್ದಾರ್ ರವರು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನಮ್ಮ ಪಾಲಿನ ಸ್ವತ್ತನ್ನು ಪಕ್ಕ ಪೋಡಿ ಮಾಡಿ ದುರಸ್ತಿ ಮಾಡಿಸಿಕೊಡಲು ಇಲ್ಲಿಯವರೆಗೆ ಯಾವುದೇ ಅರ್ಜಿಯನ್ನು ತಹಶೀಲ್ದಾರ್ ರವರಿಗೆ ಕೊಟ್ಟಿಲ್ಲ.

**3**. ನಿಡಿ-27 ಮತ್ತು 28 ರಂತೆ ಎ.ಸಿ. ನ್ಯಾಯಾಲಯದಲ್ಲಿ ನಾನು ಪ್ರಕರಣವನ್ನು ದಾಖಲಿಸಿದ್ದೇನೆ. ನಿಡಿ-29 ರ ಆದೇಶದಂತೆ ಖಾತೆ ಬದಲಾವಣೆಗೆ ತಹಶೀಲ್ದಾರ್ ರವರು ಯಾವುದೇ ಕ್ರಮ ವಹಿಸಿಲ್ಲ. ನಿಡಿ-2 ಮತ್ತು 29 ರ ಆದೇಶವು ಪ್ರಸ್ತುತ ದಾವೆಯು ಇತ್ಯರ್ಥಕ್ಕೆ ಬಾಕಿ ಇದ್ದಾಗ ಆಗಿದೆ ಎಂದರೆ ಸರಿ. ಸರ್ವೇ ನಂ:104 ರಲ್ಲಿ ಪಾಲುಪಟ್ಟಿಯಂತೆ ನನಗೆ ಬಂದ 30 ಗುಂಟೆಯಲ್ಲಿ 5 ಗುಂಟೆ ಹೇಮಾವತಿ ಕಾಲುವೆಗೆ ಭೂ-ಸ್ವಾದೀನವಾಗಿದ್ದು ಪರಿಹಾರ

ಮೊತ್ತವನ್ನು ಸಹ ನಾನು ಪಡೆದುಕೊಂಡಿದ್ದೇನೆ ಎಂದರೆ ಸರಿ. ನಾನು ಪರಿಹಾರದ ಮೊತ್ತವನ್ನು ಪಡೆದುಕೊಂಡು ಡಿ.ಡಿ.ಎಲ್.ಆರ್. ರವರ ನ್ಯಾಯಾಲಯದಲ್ಲಿ ಆ ಬಗ್ಗೆ ಯಾವ ವಿಚಾರವನ್ನು ಹೇಳದೆ ದುರಸ್ತಿಯನ್ನು ಪ್ರಶ್ನಿಸಿದ್ದೇನೆ ಎಂದರೆ ಸರಿ. ಸರ್ವೇ ನಂಃ104/1 ರಲ್ಲಿ ವಾದಿ ಸಣ್ಣೇಗೌಡನಿಗೆ ಪಾಲುಪಟ್ಟಿಯಂತೆ ಉತ್ತರ ದಿಕ್ಕಿನಿಂದ 1 ಎಕರೆ 15 ಗುಂಟೆ ಹೋಗಿದ್ದು, ಸದರಿ ವಾದಿಯ ಸ್ವತ್ತಿನ ಕೊನೆಯ ಭಾಗದಲ್ಲಿ ಕಾಲುವೆ 5 ಗುಂಟೆ ಹೋಗಿ ಕಾಲುವೆ ನಂತರ 10 ಗುಂಟೆ ವಾದಿಗೆ ಸೇರಿದ್ದು ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಭೂ-ಸ್ವಾದೀನ ಅಧಿಕಾರಿಗಳು ಸ್ವಾದೀನ ಪಡಿಸಿಕೊಂಡು ನನಗೆ ಸರ್ವೇ ನಂಃ104/1 ರಲ್ಲಿ 10 ಗುಂಟೆ ಜಮೀನು ಇದ್ದು, ಅದು ದಾವಾ ಜಮೀನಾಗಿರುತ್ತದೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಕಾಲುವೆಯ ನಂತರದ ಉಳಿಕೆ 10 ಗುಂಟೆ ಸ್ವತ್ತು ವಾದಿ ಸಣ್ಣೇಗೌಡನಿಗೆ ಸೇರಿದ್ದು ಎಂದರೆ ಸರಿಯಲ್ಲ. ವಾದಿಯ ಜಮೀನನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ತಾಕರಾರನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪಂಚಾಯಿತಿ ಪಾಲುಪಟ್ಟಿಯಂತೆ ಅವರವರ ಹಿಸ್ಸೆಗೆ ಪಹಣಿ ಪಡೆದುಕೊಂಡು ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿ. 2007 ರಲ್ಲಿ ನಾನು ಎ.ಸಿ. ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೇನೆಂದು ವಾದಿಯ 14 ಗುಂಟೆ ಸ್ವತ್ತಿಗೆ ತೊಂದರೆ ಕೊಟ್ಟಿದ್ದೇನೆ ಎಂದರೆ ನನಗೆ ಗೊತ್ತಿಲ್ಲ, ವಾದಿ ಸಣ್ಣೇಗೌಡನ 14 ಗುಂಟೆ ಎಲ್ಲಿದೆ ನನಗೆ ಗೊತ್ತಿಲ್ಲ, ನಾನು ನನ್ನ 15 ಗುಂಟೆ ಸ್ವತ್ತಿನಲ್ಲಿ ಉಳುಮೆ ಮಾಡುತ್ತಿದ್ದೇನೆ. ವಾದಿ ಸಣ್ಣೇಗೌಡರು ದಾವಾ ಸ್ವತ್ತಿನಲ್ಲಿ ಕಂದಾಯ ವೆಗೈರೆ ಕಟ್ಟಿಕೊಂಡು ಸ್ವಾದೀನದಲ್ಲಿ ಇದ್ದರು, ಅವರ ನಂತರ ಅವರ ವಾರಸುದಾರರು ಇಂದಿಗೂ ಸ್ವಾದೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ-2 ರಿಂದ 36 ನ್ನು ನಾನೇ ಸೃಷ್ಟಿಸಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ನಾನು ತೊಂದರೆ ಕೊಟ್ಟ ಕಾರಣ ವಾದಿ ಸಣ್ಣೇಗೌಡರು ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನಗೆ ಅನುಕೂಲವಾಗಲೆಂದು ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಪ್ರತಿವಾದಿ-2 ಮತ್ತು 3 ಪರ ವಕೀಲರಾದ ಶ್ರೀ ಕೆ.ಎಂ.ಆರ್.ರವರಿಂದ ಃ**

**1.** ಸರ್ವೇ ನಂಃ104/1 ರಲ್ಲಿ ಪಾಲುಪಟ್ಟಿಯಂತೆ ವಾದಿ ಸಣ್ಣೇಗೌಡರಿಗೆ 1 ಎಕರೆ 15 ಗುಂಟೆ ಪಹಣಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿಗೆ ಸಣ್ಣೇಗೌಡರೆ ಕಂದಾಯ

ಕಟ್ಟುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಾದಿಯೇ ಸ್ವಾದೀನದಲ್ಲಿದ್ದರು ಎಂದರೆ ಸರಿಯಲ್ಲ. ವಾದಿ ಸಣ್ಣೇಗೌಡರು ಬದುಕಿದ್ದಾಗ ಆತನ ಹೆಂಡತಿ ಮಕ್ಕಳು ದಾವಾ ಸ್ವತ್ತಿನಲ್ಲಿ ಜಂಟಿ ಸ್ವಾದೀನದಲ್ಲಿದ್ದರು ಎಂದರೆ ಸರಿಯಲ್ಲ. ಸಣ್ಣೇಗೌಡರು ತೀರಿಕೊಂಡ ನಂತರ ಆತನ ಹೆಂಡತಿ ಮಕ್ಕಳು ದಾವಾ ಸ್ವತ್ತಿನಲ್ಲಿ ಜಂಟಿ ಸ್ವಾದೀನದಲ್ಲಿದ್ದರು ಎಂದರೆ ಸರಿಯಲ್ಲ. ಸರ್ವೇ ನಂಃ104/1 ರಲ್ಲಿ 1 ಎಕರೆ 14 ಗುಂಟೆಗೆ ಓ.ಎಸ್. ನಂಃ32/2018 ರಂದು ವಿಭಾಗಕ್ಕಾಗಿ ಸಣ್ಣೇಗೌಡರ ಹೆಂಡತಿ ಮಕ್ಕಳ ನಡುವೆ ದಾವೆ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ನಾನು ಎಂದಿಗೂ ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಸಾಕ್ಷಿದಾರರ ಸಹಿ.** **ಪಾಂಡವಪುರ.**